**ದಿನಾಂಕಃ 16–07–2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು .**

**ಪಾಟೀ ಸವಾಲುಃ 12 ಮತ್ತು 13 ನೇ ಪ್ರತಿವಾದಿ ಪರ ಶ್ರೀ. ಸಿ ಎನ್ ಎಸ್ ವಕೀಲರಿಂದಃ**

1. 2 ನೇ ಪ್ರತಿವಾದಿ ಬಸವರಾಜ ನನ್ನ ತಂದೆಯಾಗಬೇಕು. 12 ಮತ್ತು 13 ನೇ ಪ್ರತಿವಾದಿಯರು ನನ್ನ ತಂದೆಯ ತಂಗಿಯಂದಿರು ಎಂದರೆ ಸರಿ. ನನ್ನಅಜ್ಜ ಶಿವಪ್ಪ ಜೀವಂತ ಇದ್ದಾಗ ಆಗಲೀ ಅಥವಾ ಅವರು ಮರಣ ಹೊಂದಿದ ನಂತರವಾಗಲಿ ನಮ್ಮ ಕುಟುಂಬದಲ್ಲಿ ದಾವಾ ಆಸ್ತಿಗಳ ಕುರಿತು ಯಾವುದೇ ಪಾಲು ವಿಭಾಗ ಆಗಿಲ್ಲ ಎಂದರೆ ಸರಿ. ನನ್ನ ತಂದೆಗೆ ಇದ್ದಷ್ಟೆ ಪಾಲು 12 ಮತ್ತು 13 ನೇ ಪ್ರತಿವಾದಿಯವರಿಗೂ ಇದೆ ಎಂದರೆ ಸಾಕ್ಷಿ 12 ಮತ್ತು 13 ನೇ ಪ್ರತಿವಾದಿಯರು ಸಲ್ಲಿಸಿದ ದಾವೆ ವಜಾ ಆಗಿರುತ್ತದೆ ಎಂದು ಹೇಳುತ್ತಾರೆ. 12 ಮತ್ತು 13 ನೇ ಪ್ರತಿವಾದಿಯರು ಸಲ್ಲಿಸಿದ ದಾವೆ ತಾಂತ್ರಿಕ ದೋಷದಿಂದ ವಜಾ ಆಗಿರುತ್ತದೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಗಳು 12 ಮತ್ತು 13 ನೇ ಪ್ರತಿವಾದಿಯವರಿಗೆ ತವರು ಮನೆ ಆಸ್ತಿಗಳು ಆಗುತ್ತವೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ 12 ಮತ್ತು 13 ನೇ ಪ್ರತಿವಾದಿಯರಿಗೆ ಇಲ್ಲಿಯವರೆಗೂ ಯಾವುದೇ ಪಾಲು ಕೊಟ್ಟಿಲ್ಲ ಎಂದರೆ ಸರಿ. ತವರು ಮನೆಯ ಆಸ್ತಿಗಳಲ್ಲಿ ನಮಗೆ ಯಾವುದೇ ಪಾಲು ಬೇಡ ಎಂದು 12 ಮತ್ತು 13 ನೇ ಪ್ರತಿವಾದಿಯರು ಯಾವುದೇ ದಾಖಲೆ ಮಾಡಿಕೊಟ್ಟಿಲ್ಲ ಎಂದರೆ ಸರಿ.

**ಪಾಟೀ ಸವಾಲುಃ 2, 7 ರಿಂದ 9 ನೇ ಪ್ರತಿವಾದಿ ಪರ ವಕೀಲರು ಸಮಯವಕಾಶ ಕೋರಿದ್ದರಿಂದ ಮುಂದೂಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/–
ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.